## ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಹೆಚ್.ಎಂ ರಮೇಶಗೌಡ**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 821**

**ಉತ್ತರಿಸಬೇಕಾದ ದಿನಾಂಕ : 09.03.2021**

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಹಕಾರ ಇಲಾಖೆಯಿಂದ ಕಳೆದ ಸಾಲುಗಳಲ್ಲಿ ಸಾಲಮನ್ನಾ ಯೋಜನೆಯಡಿಯಲ್ಲಿ ಸಾಲಮನ್ನಾ ಮಾಡಲು ವಿವಿಧ ಸಹಕಾರ ಸಂಸ್ಥೆಗಳಿಗೆ ಸಹಾಯಧನ ಬಿಡುಗಡೆ ಮಾಡಲಾಗಿದೆಯೇ; ಹಾಗಿದ್ದಲ್ಲಿ, ಸಹಾಯಧನದ ವಿವರವನ್ನು ಜಿಲ್ಲಾವಾರು ಸಹಕಾರ ಸಂಸ್ಥೆಗಳ ವಿವರದೊಂದಿಗೆ ಒದಗಿಸುವುದು. | ಹೌದು,<br>ಸಹಕಾರ ಸಂಘಗಳಲ್ಲಿನ ರೂ.1.00 ಲಕ್ಷಗಳ ಸಾಲಮನ್ನಾ ಯೋಜನೆಯಡಿಯಲ್ಲಿ 2018-19, 2019-20 ನೇ ಸಾಲುಗಳಲ್ಲಿ 16,48,820 ರೈತರಿಗೆ ರೂ. 7692.33 ಕೋಟಿಗಳ ಸಹಾಯಧನವನ್ನು ಸಹಕಾರ ಬ್ಯಾಂಕುಗಳಲ್ಲಿನ ರೈತರ ಉಳಿತಾಯ ಖಾತೆಗಳಿಗೆ NEFT ಮೂಲಕ ಬಿಡುಗಡೆ ಮಾಡಲಾಗಿದೆ. ಜಿಲ್ಲಾವಾರು ಮತ್ತು ಬ್ಯಾಂಕುವಾರು ಅನುದಾನ ಬಿಡುಗಡೆ ಮಾಡಿದ ವಿವರವನ್ನು **ಅನುಬಂಧದಲ್ಲಿ** ನೀಡಲಾಗಿದೆ. |
| ಆ) | ರಾಜ್ಯದ ಹಲವು ಜಿಲ್ಲೆಗಳಲ್ಲಿ ವಿವಿಧ ಸಹಕಾರಿ ಸಂಸ್ಥೆಗಳು ಸಹಾಯಧನದ ಹಣವನ್ನು ದುರುಪಯೋಗಪಡಿಸಿಕೊಂಡು ಫಲಾನುಭವಿಗಳಿಗೆ ಅನ್ಯಾಯವೆಸಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಂತಹ ಪ್ರಕರಣಗಳ ವಿವರ ನೀಡುವುದು ಹಾಗೂ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | ಸಾಲ ಮನ್ನಾ ಅನುದಾನವನ್ನು ನೇರವಾಗಿ NEFT ಮೂಲಕ ರೈತರ ಖಾತೆಗಳಿಗೆ ಜಮಾ ನೀಡಿ ಈ ಮೊತ್ತವನ್ನು ಸಹಕಾರ ಸಂಘಗಳು ರೈತರು ಪಾವತಿಸತಕ್ಕ ಸಾಲದ ಖಾತೆಗೆ ಹೊಂದಾಣಿಕೆ ಮಾಡಿಕೊಳ್ಳಬೇಕಿದ್ದು, ಈ ಮೊತ್ತ ದುರುಪಯೋಗಪಡಿಸಿಕೊಂಡಿರುವ ಯಾವುದೇ ಪ್ರಕರಣಗಳು ವರದಿಯಾಗಿಲ್ಲ.<br><br>ಆದರೆ, ಸಾಲಮನ್ನಾ ಯೋಜನೆಯಲ್ಲಿ ಅನರ್ಹ ರೈತರಿಗೆ ಸಹಕಾರ ಸಂಘಗಳು ಸಾಲಮನ್ನಾ ಕ್ಲೇಮು ಮಾಡಿರುವ ಪ್ರಕರಣಗಳು ವರದಿಯಾಗಿರುತ್ತವೆ. ಇಂತಹ ಪ್ರಕರಣಗಳಲ್ಲಿ ಸಾಲಮನ್ನಾ ಯೋಜನೆಯಲ್ಲಿ ಸಹಕಾರ ಸಂಘಗಳು ದಿ:10.07.2018 ರ ನಂತರ ವಿತರಿಸಿದ ಸಾಲಗಳನ್ನು ಅಥವಾ ನೈಜವಾಗಿ ಸಾಲ ವಿತರಿಸದೇ ಸಾಲಮನ್ನಾ ಯೋಜನೆಯಲ್ಲಿ ಕ್ಲೇಮು ಮಾಡಿರುವ ಅಥವಾ ಸಾಲಮನ್ನಾ ಯೋಜನೆಯ ವ್ಯಾಪ್ತಿಗೆ ಬರದೇ ಇರುವ ರೈತರ ಸಾಲಮನ್ನಾವನ್ನು ಕ್ಲೇಮು ಮಾಡಿರುವ 1725 ಪ್ರಕರಣಗಳಲ್ಲಿ ರೂ. 7.90 ಕೋಟಿಗಳ ಸಾಲ ಮನ್ನಾ ಬಿಡುಗಡೆಯಾಗಿದ್ದು, ಈ ಮೊತ್ತವನ್ನು ಸರ್ಕಾರಕ್ಕೆ ವಾಪಸ್ ಪಾವತಿಸಲು ಸಹಕಾರ ಸಂಘಗಳಿಂದ ಅಪೆಕ್ಸ್ ಬ್ಯಾಂಕಿನಲ್ಲಿ ಜಮಾ ಪಡೆಯಲಾಗಿದೆ. |

| | | |
|---|---|---|
| | | ಇದಲ್ಲದೇ ಅರ್ಹ ರೈತರಿಗೆ ಸಾಲಮನ್ನಾ ಬಿಡುಗಡೆಯಾದ ನಂತರ ಪುನಃ ಸಾಲ ವಿತರಿಸುವಾಗ ಸಾಲಮನ್ನಾ ಆದ ಮೊತ್ತಕ್ಕಿಂತ ಕಡಿಮೆ ಮೊತ್ತದ ಸಾಲ ರೈತರಿಗೆ ತಲುಪಿರುವ ಬಗ್ಗೆ ಹಾಸನ ಜಿಲ್ಲೆಯಲ್ಲಿ ದೂರು ಬಂದ ಹಿನ್ನೆಲೆಯಲ್ಲಿ ಈ ಕುರಿತು ಆಯ್ದ ನಾಲ್ಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಾದ ಹಿರಿಕಡಲೂರು, ಹಳೇಕೊಪ್ಪಲು, ಮತಿಘಟ್ಟ ಮತ್ತು ಗೌಡಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹಾಸನ ಉಪ ವಿಭಾಗ, ಹಾಸನ ಇವರು ದಿನಾಂಕ: 28.11.2019 ರಂದು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 65 ರಡಿ ಪರಿವೀಕ್ಷಣೆಗೆ ಆದೇಶಿಸಿರುತ್ತಾರೆ. ಅದರಂತೆ ಪರಿವೀಕ್ಷಣೆ ಪೂರ್ಣಗೊಂಡು ವರದಿಯನ್ನು ಪಡೆಯಲಾಗಿದ್ದು, ವರದಿಯಲ್ಲಿ ರೈತರು ಚೆಕ್ ಅಥವಾ ವಿತ್ ಡ್ರಾ ಸ್ಲಿಪ್ ಮೂಲಕ ಹಣ ಡ್ರಾ ಮಾಡಿರುವುದಾಗಿ ಕಂಡು ಬಂದಿರುವುದರಿಂದ ಆರೋಪಗಳು ಸಾಬೀತಾಗಿರುವುದಿಲ್ಲ. |
| ಇ) | ವಿಚಾರಣೆ ನಡೆಸುತ್ತಿರುವ ಪ್ರಕರಣಗಳೆಷ್ಟು; ಅವು ಯಾವುವು? (ಸಹಕಾರ ಸಂಸ್ಥೆಗಳ ವಿವರಗಳನ್ನು ಒದಗಿಸುವುದು) | ಹಾಸನ ಜಿಲ್ಲೆಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಾದ ಹಿರಿಕಡಲೂರು, ಹಳೇಕೊಪ್ಪಲು, ಮತಿಘಟ್ಟ ಮತ್ತು ಗೌಡಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹಾಸನ ಉಪ ವಿಭಾಗ, ಹಾಸನ ಇವರು ದಿ:28.11.2019 ರಂದು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 65 ರಡಿ ಪರಿವೀಕ್ಷಣೆಗೆ ಆದೇಶಿಸಿರುತ್ತಾರೆ. ಪರಿವೀಕ್ಷಣೆ ಪೂರ್ಣಗೊಂಡಿದ್ದು, ಸದರಿ ವರದಿಯಲ್ಲಿ ರೈತರು ಚೆಕ್ ಅಥವಾ ವಿತ್ ಡ್ರಾ ಸ್ಲಿಪ್ ಮೂಲಕ ಹಣ ಡ್ರಾ ಮಾಡಿರುವುದಾಗಿ ಕಂಡು ಬಂದಿರುವುದರಿಂದ ಆರೋಪಗಳು ಸಾಬೀತಾಗಿರುವುದಿಲ್ಲ. |

**ಸಂಖ್ಯೆ: ಸಿಒ 63 ಸಿಎಲ್ಎಸ್ 2021**

(ಎಸ್.ಟಿ. ಸೋಮಶೇಖರ್)
**ಸಹಕಾರ ಸಚಿವರು**

. ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ಹೆಚ್.ಎಂ.ರಮೇಶ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು)
ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 821 ಕ್ಕೆ ಅನುಬಂಧ

ಸಹಕಾರ ಸಂಘಗಳ ಸಾಲ ಮನ್ನಾ ಯೋಜನೆಯಲ್ಲಿ ಅನುದಾನ ಬಿಡುಗಡೆ ಮಾಡಿರುವ ವಿವರ

(ರೂ.ಕೋಟಿಗಳಲ್ಲಿ)

| ಕ್ರ ಸಂ | ಜಿಲ್ಲೆಯ ಹೆಸರು | ಡಿಸಿಸಿ ಬ್ಯಾಂಕಿನ ಹೆಸರು | ಸಾಲ ಮನ್ನಾ ಸೌಲಭ್ಯ ಪಡೆದ ರೈತರ ವಿವರ | | ಅನುದಾನ ಬಿಡುಗಡೆ ಮಾಡಿದ ರೈತರ ವಿವರ | | ಬ್ಯಾಂಕುಗಳು ಅನರ್ಹ ರೈತರ ವಾಪಸ್ ನೀಡಿದ ಮೊತ್ತ | |
|---|---|---|---|---|---|---|---|---|
| | | | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| 1 | ಬಾಗಲಕೋಟೆ | ಬಾಗಲಕೋಟೆ | 129856 | 695.21 | 121029 | 644.27 | 436 | 1.55 |
| 2 | ಬೆಂಗಳೂರು ಗ್ರಾ | ಬೆಂಗಳೂರು ನಗರ, | 16830 | 79.02 | 16337 | 76.56 | | |
| 3 | ಬೆಂಗಳೂರು ನಗರ | ಗ್ರಾಮಾಂತರ ಮತ್ತು | 7695 | 39.29 | 7257 | 36.94 | | |
| 4 | ರಾಮನಗರ | ರಾಮನಗರ | 36358 | 167.12 | 35328 | 162.08 | | |
| 5 | ಬೆಳಗಾವಿ | ಬೆಳಗಾವಿ | 265690 | 1050.08 | 260330 | 1022.09 | 44 | 0.12 |
| 6 | ಬಳ್ಳಾರಿ | ಬಳ್ಳಾರಿ | 62797 | 365.30 | 61043 | 353.02 | | |
| 7 | ಬೀದರ್ | ಬೀದರ್ | 101882 | 422.31 | 97808 | 402.25 | 105 | 0.37 |
| 8 | ವಿಜಯಪುರ | ವಿಜಯಪುರ | 148831 | 611.82 | 138858 | 567.30 | | |
| 9 | ಮೈಸೂರು | ಮೈಸೂರು ಮತ್ತು | 49430 | 326.33 | 48537 | 319.75 | 96 | 0.71 |
| 10 | ಚಾಮರಾಜನಗರ | ಚಾಮರಾಜನಗರ | 16421 | 100.54 | 16089 | 98.33 | | |
| 11 | ಕೋಲಾರ | ಕೋಲಾರ ಮತ್ತು | 9783 | 87.45 | 9691 | 86.62 | | |
| 12 | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ | 11113 | 86.74 | 11065 | 86.31 | | |
| 13 | ಚಿಕ್ಕಮಗಳೂರು | ಚಿಕ್ಕಮಗಳೂರು | 26192 | 171.63 | 25541 | 166.83 | | |
| 14 | ಚಿತ್ರದುರ್ಗ | ಚಿತ್ರದುರ್ಗ | 34909 | 159.49 | 33742 | 152.38 | 140 | 0.84 |
| 15 | ದಕ್ಷಿಣ ಕನ್ನಡ | ದಕ್ಷಿಣ ಕನ್ನಡ | 58380 | 432.81 | 58065 | 430.20 | | |
| 16 | ಉಡುಪಿ | ಉಡುಪಿ | 21149 | 145.44 | 21050 | 144.66 | | |
| 17 | ದಾವಣಗೆರೆ | ದಾವಣಗೆರೆ | 60457 | 206.34 | 57509 | 194.70 | | |
| 18 | ಧಾರವಾಡ | ಧಾರವಾಡ, | 13743 | 56.98 | 13156 | 54.13 | 185 | 1.20 |
| 19 | ಗದಗ | ಗದಗ ಮತ್ತು | 16055 | 62.29 | 15649 | 60.54 | | |
| 20 | ಹಾವೇರಿ | ಹಾವೇರಿ | 20852 | 67.33 | 20502 | 66.04 | | |
| 21 | ಕಲಬುರಗಿ | ಕಲಬುರಗಿ ಮತ್ತು | 41043 | 112.46 | 39266 | 108.10 | 347 | 1.00 |
| 22 | ಯಾದಗಿರಿ | ಯಾದಗಿರಿ | 11748 | 26.59 | 10993 | 24.58 | | |
| 23 | ಹಾಸನ | ಹಾಸನ | 114019 | 470.16 | 111710 | 458.94 | 24 | 0.05 |
| 24 | ಕೊಡಗು | ಕೊಡಗು | 27995 | 218.23 | 26416 | 204.95 | | |
| 25 | ರಾಯಚೂರು | ರಾಯಚೂರು ಮತ್ತು | 47600 | 223.32 | 45783 | 213.02 | 62 | 0.24 |
| 26 | ಕೊಪ್ಪಳ | ಕೊಪ್ಪಳ | 22313 | 93.25 | 21869 | 90.76 | | |
| 27 | ಮಂಡ್ಯ | ಮಂಡ್ಯ | 105945 | 492.95 | 103113 | 478.28 | 176 | 1.03 |
| 28 | ಶಿವಮೊಗ್ಗ | ಶಿವಮೊಗ್ಗ | 31416 | 127.59 | 30809 | 124.48 | 50 | 0.27 |
| 29 | ತುಮಕೂರು | ತುಮಕೂರು | 116401 | 411.98 | 112186 | 393.94 | | |
| 30 | ಉತ್ತರ ಕನ್ನಡ | ಉತ್ತರ ಕನ್ನಡ | 79146 | 477.44 | 78089 | 470.28 | 60 | 0.52 |
| | | **ಒಟ್ಟು** | **1706049** | **7987.47** | **1648820** | **7692.33** | **1725** | **7.90** |